ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಶ್ರೀರಂಗಪಟ್ಟಣ

ಸಿಸಿಃ ನಂಃ **526/2017**

ಪಿ.ಡಬ್ಲ್ಯೂಃ **04**

ಸಿ.ಡಬ್ಲ್ಯೂಃ **06**

| | |
|---|---|
| ಸಾಕ್ಷಿಯ ಹೆಸರು | ಶಿವಸಿದ್ದು ಎಂ ಎನ್ |
| ತಂದೆ/ಗಂಡನ ಹೆಸರು | ಲೇ. ಮಂಟ್ಯಾಚಾರಿ |
| ವಯಸ್ಸು | 39 ವರ್ಷ |
| ಉದ್ಯೋಗ | ಉಪವಲಯ ಅರಣ್ಯ ಅಧಿಕಾರಿ |
| ವಿಳಾಸ | ಕೆ.ಆರ್.ಪೇಟೆ ಸಾಮಾಜಿಕ ವಲಯ |

ಸಾಕ್ಷಿಗೆ ದಿನಾಂಕ **07.05.2025** ರಂದು ಪ್ರಮಾಣವಚನ ನೀಡಲಾಯಿತು.

ಮುಖ್ಯ ವಿಚಾರಣೆ ಃ ಮಾನ್ಯ ಸ ಸ ಅ ರವರಿಂದಃ

ನಾನು ಜುಲೈ **2014** ರಿಂದ ಆಗಸ್ಟ್ **2017** ರವರೆಗೆ ಶ್ರೀರಂಗಪಟ್ಟಣ ಪ್ರಾದೇಶಿಕ ವಲಯದಲ್ಲಿ ಅರಣ್ಯ ರಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ. **12.03.2015** ರಂದು ಮಂಡ್ಯ ಜಿಲ್ಲಾ ಶ್ರೀರಂಗಪಟ್ಟಣ ತಾಲ್ಲೂಕು ವ್ಯಾಪ್ತಿಯಲ್ಲಿ ಬರುವ ಜಕ್ಕನಹಳ್ಳಿ, ಚನ್ನನಕೆರೆ, ಕಾಳೇನಹಳ್ಳಿ, ಟಿ.ಎಂ.ಹೊಸೂರು, ಗಣಂಗೂರು, ಗೌಡಹಳ್ಳಿ ಸರಹದ್ದಿನ ಗ್ರಾಮದಲ್ಲಿ ಅನಧೀಕೃತವಾಗಿ ಯಾವುದೇ ಪರವಾನಗಿ ಇಲ್ಲದೆ ಕಲ್ಲು ಗಣಿಗಾರಿಕೆ ನಡೆಸುತ್ತಿದ್ದಾರೆ ಎಂದು ಬಂದ ಮೌಖಿಕ ದೂರಿನ ಮೇರೆಗೆ ಶ್ರೀರಂಗಪಟ್ಟಣ ತಹಶೀಲ್ದಾರ್ ರವರ ನೇತೃತ್ವದಲ್ಲಿ ಅರಣ್ಯ ಇಲಾಖೆ, ಕಂದಾಯ ಇಲಾಖೆ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಹಾಗೂ ಪೋಲಿಸ್ ಇಲಾಖೆ ಜಂಟಿ ಕಾರ್ಯಚರಣೆಯನ್ನು ಕೈಗೊಳ್ಳಲಾಯಿತು. ಈ ಕಾರ್ಯಾಚರಣೆಯಲ್ಲಿ ನಮ್ಮ ವಲಯ ಅರಣ್ಯಾಧಿಕಾರಿಗಳ ಜೊತೆ ನಾನು ಹೋಗಿದ್ದು ಕಂದಾಯ ಇಲಾಖೆಯಿಂದ ತಹಶೀಲ್ದಾರ್ ರವರಾದ ಮಲ್ಲಿಕಾರ್ಜುನ್, ಕಂದಾಯ ನೀರಿಕ್ಷಕರು, ಗ್ರಾಮಲೆಕ್ಕಿಗರಾದ ಬಸವರಾಜು ಮತ್ತು ಸೀಮಾ, ಗಣಿ ಮತ್ತು ಭೂ ವಿಜ್ಞಾನ ಇಲಾಖೆಯಿಂದ ನಾಗೇಶ್ , ಪೋಲಿಸ್ ಇಲಾಖೆ ಶಿವರುದ್ರ ರವರುಗಳ ಜೊತೆಯಲ್ಲಿ ದಿ. **12.03.2015** ರಂದು ಮ.**2.30** ರ ಸಮಯದಲ್ಲಿ ಅನಧೀಕೃತವಾಗಿ ಗಣಿಗಾರಿಕೆ ನಡೆಸುತ್ತಿದ್ದ ಸ್ಥಳಗಳಿಗೆ ದಾಳಿ ಮಾಡಲಾಗಿ ದೂರದಿಂದಲೇ ನಾವು ಬರುವುದನ್ನು ಗಮನಿಸಿದ ಗಣಿಗಾರಿಕೆ ನಡೆಸುತ್ತಿದ್ದ ಕೆಲಸಗಾರರು ತಮ್ಮ ಕೆಲಸಕ್ಕೆ ಬಳಸುತ್ತಿದ್ದ ಉಪಕರಣಗಳೊಂದಿಗೆ ಓಡಿ ಹೋಗಿರುತ್ತಾರೆ.

ನಂತರ ಸದರಿ ಸ್ಥಳವನ್ನು ಪರಿಶೀಲಿಸಿ ನೋಡಲಾಗಿ ಶ್ರೀರಂಗಪಟ್ಟಣ ತಾಲ್ಲೂಕು, ಅರಕೆರೆ ಹೋಬಳಿ, ಜಕ್ಕನಹಳ್ಳಿ ಗ್ರಾಮ ಸರ್ವೆ ನಂ.83/ಬಿ-18 ಪಿ3, 0.20 ಗುಂಟೆ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿ ಗುಂಡಿ ಬಿದ್ದಿದ್ದು ಸದರಿ ಸ್ಥಳದ ಮಾಲೀಕರು ಜಕ್ಕನಹಳ್ಳಿ ಗ್ರಾಮದ ಜವರೇಗೌಡ ಬಿನ್ ನಂಜುಂಡೇಗೌಡ ರವರ ಹೆಸರಿನಲ್ಲಿರುತ್ತದೆ. ಸರ್ವೆ ನಂ.83/ಬಿ-16 ರಲ್ಲಿ 1 ಎಕರೆ 19 ಗುಂಟೆ ಇದ್ದು ಸದರಿ ಸ್ಥಳದಲ್ಲಿ ಅಕ್ರಮ ಗಣಿಗಾರಿಕೆ ನಡೆಸಿ ಗುಂಡಿ ಬಿದ್ದಿದ್ದು ಈ ಸ್ಥಳದ ಮಾಲೀಕರು ಜಕ್ಕನಹಳ್ಳಿ ಗ್ರಾಮದ ವಿಷಕರಂಠ ಬಿನ್ ಜವರೇಗೌಡ, ಸರ್ವೆ ನಂ.83/ಪೈ-ಪಿ4 2 ಎಕರೆ 39 ಗುಂಟೆ ಜಮೀನಿನಲ್ಲಿ ಅಕ್ರಮ ಗಣಿಗಾರಿಕೆ ನಡೆಸಿ ಗುಂಡಿ ಬಿದ್ದಿದ್ದು ಈ ಸ್ಥಳದ ಮಾಲೀಕರು ಚನ್ನನಕೆರೆ ಗ್ರಾಮದ ಚಿಕ್ಕಯ್ಯ ಬಿನ್ ಚಿಕ್ಕಯ್ಯ ಹಾಗೂ ಜಕ್ಕನಹಳ್ಳಿ ಗ್ರಾಮದ ಶಿವಮೂರ್ತಿ ಬಿನ್ ಬಾಲರಾಜು ಸರ್ವೆ ನಂ.83/ಪಿ1-ಪಿ1 ರಲ್ಲಿ 0.20 ಗುಂಟೆ ರಲ್ಲಿ ಅಕ್ರಮ ಗಣಿಗಾರಿಕೆ ನಡೆಸಿ ಗುಂಡಿ ಬಿದ್ದಿದ್ದು ಈ ಸ್ಥಳದ ಮಾಲೀಕರು ಚೌಡಯ್ಯ ಬಿನ್ ಕಾಳ ಉರುಫ್ ಚಿಕ್ಕೈದ, ಜಕ್ಕನಹಳ್ಳಿ ಗ್ರಾಮ. ಮುಂದುವರೆದು ಸದರಿ ಸ್ಥಳದಲ್ಲಿ ಮಹಜರ್ ಕ್ರಮ ಜರುಗಿಸಿ ಸದರಿ ವಿಷಯಕ್ಕೆ ಸಂಬಂಧಿಸಿದ ದಾಖಲಾತಿಗಳನ್ನು ಪಡೆದು ಹಿರಿಯ ಅಧಿಕಾರಿಗಳೊಂದಿಗೆ ಚರ್ಚಿಸಿ ಗಣಿ ಮತ್ತು ಭೂ ವಿಜ್ಞಾನಿಗಳಾದ ನಾಗೇಶ್ ರವರು ದಿ.17.03.2015 ರಂದು ದೂರು ನೀಡಿರುತ್ತಾರೆಂದು ತಿಳಿದು ಬಂದಿರುತ್ತದೆ.

ಸಾಕ್ಷಿಗೆ ನಿಪಿ 2 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ 2 ಸಿ ಎಂದು ಗುರುತಿಸಲಾಯಿತು. ಸಾಕ್ಷಿಗೆ ನಿಪಿ 3 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ 3 ಸಿ ಎಂದು ಗುರುತಿಸಲಾಯಿತು. ನಾನು ಈ ಘಟನೆ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ಸಾಕ್ಷಿಗೆ ನಿಪಿ 4 ನ್ನು ತೋರಿಸಲಾಗಿ ಸಾಕ್ಷಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಸಾಕ್ಷಿಯ ಸಹಿಯನ್ನು ನಿಪಿ 4 ಸಿ ಎಂದು ಗುರುತಿಸಲಾಯಿತು.

## ಪಾಟೀಸವಾಲು: ಆರೋಪಿಪರ ವಕೀಲರು

ನಿಪಿ 1 ರಿಂದ 4 ರಲ್ಲಿ ಅಕ್ರಮ ಗಣಿಗಾರಿಕೆ ಮಾಡಿದ ಸ್ಥಳದ ಚೆಕ್ಕುಬಂದಿ ನಮೂದಿಸಿಲ್ಲ ಎಂದರೆ ಸರಿ. ನಿಪಿ 1 ರಿಂದ 4 ಯಾರ ಹಸ್ತಾಕ್ಷರದಿಂದ ಬರೆಯಲಾಗಿದೆ ಎಂದು ನಮೂದು ಇಲ್ಲ ಎಂದರೆ ಸರಿ. ನಿಪಿ 1 ರಿಂದ 4 ರಲ್ಲಿ ಸ್ಥಳದಲ್ಲಿ ಎಷ್ಟು ಮೊತ್ತದ ಅಥವಾ ಎಷ್ಟು ಆಳತೆಯ ಗಲ್ಲು ಗಣಿಗಾರಿಕೆ ಮಾಡಲ್ಪಟ್ಟಿದೆ ಎಂಬ ಬಗ್ಗೆ ಒಕ್ಕಣೆ ಇಲ್ಲ ಎಂದರೆ

ಸರಿ. ಕಲ್ಲು ಗಣಿಗಾರಿಕೆ ಮಾಡಿದ ಸ್ಥಳದ ಕಚ್ಚಾನಕ್ಷೆ ತಯಾರಿಸಿ ಮಹಜರ್ ಮಾಡಿಲ್ಲ ಎಂದರೆ ಸರಿ. ಮಹಜರ್ ಕಾಲದಲ್ಲಿ ಕಲ್ಲು ಗಣಿಗಾರಿಕೆ ಮಾಡಿದ ಛಾಯಚಿತ್ರ ತೆಗೆದು ದೂರು ದಾಖಲಿಸಿಕೊಂಡಿಲ್ಲ ಎಂದರೆ ಸರಿ. ಸಮಯದ ಅಭಾವ ಇದ್ದ ಕಾರಣ ಆ ದಿನ ಛಾಯಚಿತ್ರ ತೆಗೆದಿರುವುದಿಲ್ಲ. ಆರೋಪಿತರು ಯಾವುದೇ ಗಣಿಗಾರಿಕೆ ಮಾಡಿರುವುದಿಲ್ಲ. ಆರೋಪಿತರ ವಿರುದ್ಧ ವಾರ್ಷಿಕ ಅಂಕಿ-ಅಂಶಗಳಿಗೋಸ್ಕರ ದೂರು ದಾಖಲಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಸಾ.ಓ.ಹೇ.ಸ.ಒ

ಅಪರ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ
ಶ್ರೀರಂಗಪಟ್ಟಣ